**ಸಿವಿಲ್ ಜಡ್ಜ್ ಹಾಗೂ ಹೆ.ಪ್ರ.ದ.ನ್ಯಾ.ದಃ ನ್ಯಾಯಾಲಯಃ ತರೀಕೆರೆ**

**ಸಿ.ಸಿ ಸಂಖ್ಯೆ ::1148/2022**

| | | | |
|---|---|---|---|
| **ಸಾಕ್ಷಿದಾರರ ಹೆಸರು** | : | ಉಲ್ಲಾಸ್ ಎಂ | **PW**-1 |
| **ತಂದೆಯ ಹೆಸರು** | : | ಮೋಹನ್ ರಾಜ್ | **CW**-2 |
| **ವಯಸ್ಸು** | : | 43 ವರ್ಷ | |
| **ಉದ್ಯೋಗ** | : | Range Forest Officer, Government Timber Depot, Shivamooga | |
| **ವಾಸಸ್ಥಳ** | : | ಶಿವಮೊಗ್ಗ | |

**ದಿನಾಂಕಃ25-02-2025 ರಂದು ಪ್ರಮಾಣವಚನ ಬೋಧಿಸಲಾಯಿತು.**

**(ದಂಡ ಪ್ರಕ್ರಿಯಾ ಸಂಹಿತೆಯ ಕಲಂ. 299 ರಡಿಯಲ್ಲಿ)**

**:: ಮುಖ್ಯ ವಿಚಾರಣೆ :: ಮಾನ್ಯ A.P.P ರವರಿಂದ ::**

ನಾನು 2015 ರಿಂದ 2018 ರವರೆಗೆ ಭದ್ರಾ ವನ್ಯ ಜೀವಿ ವಲಯದ ವಲಯ ಅರಣ್ಯಾಧಿಕಾರಿಯಾಗಿ ಕರ್ತವ್ಯವನ್ನು ನಿರ್ವಹಿಸಿದ್ದೇನೆ.

ಪ್ರಕರಣದಲ್ಲಿ ಆರೋಪಿಗಳು ನಮ್ಮ ಇಲಾಖ ವ್ಯಾಪ್ತಿಯಲ್ಲಿ ಇರುವ ಲಕ್ಕವಳ್ಳಿ ಮೀಸಲು ಅರಣ್ಯ ಪ್ರದೇಶದಿಂದ ದಿಃ 12.08.2016 ರಂದು ಸಂಜೆ 05.00 ಗಂಟೆ ಸುಮಾರಿಗೆ ಕಾವಲು ಗ್ರಾಮದ ಸರ್ವೇ ನಂಬರ್ 1/ಪಿ ರಿಂದ 1 ಗಂಧದ ಮರವನ್ನು ಕಡಿದು 5 ತುಂಡು ಮಾಡಿ ಪರಿವರ್ತನೆ ಮಾಡುವ ಸಮಯದಲ್ಲಿ ನಮ್ಮ ಅರಣ್ಯ ಇಲಾಖೆಯವರು ದಾಳಿ ಮಾಡಿ ಸದರಿ ಜಾಗದಲ್ಲಿಯೇ 3 ಜನ ಆರೋಪಿಗಳನ್ನು ಹಿಡಿದಿರುತ್ತಾರೆ ಮತ್ತೊಬ್ಬ ಆರೋಪಿ ಅಲ್ಲಿಂದ ತಪ್ಪಿಸಿಕೊಂಡು ಓಡಿ ಹೋಗಿರುತ್ತಾನೆ. ಈ ಬಗ್ಗೆ ನನಗೆ ಆಗಿನ ನಮ್ಮ ವಲಯದ DyRFO ಜಿ ರಾಘವೇಂದ್ರ/ಚಾಸಾ 3 ರವರು 2 ಜನ ಆರೋಪಿಗಳನ್ನು ಬಂಧಿಸಿ ಮಹಜರ್ ಕ್ರಮವನ್ನು ಜರುಗಿಸಿ ಗಂಧದ ಮರವನ್ನು ಜಪ್ತಿ ಮಾಡಿ ನನಗೆ ವರದಿಯನ್ನು ನೀಡಿರುತ್ತಾರೆ. ಸದರಿ ವರದಿಯ ಆಧಾರದಲ್ಲಿ ನಮ್ಮ

ಇಲಾಖೆಯಿಂದ ತನಿಖೆಯನ್ನು ಕೈಗೊಂಡು ನಂತರದಲ್ಲಿ ನಾನು ನ್ಯಾಯಾಲಯಕ್ಕೆ ಆರೋಪಿಗಳ ವಿರುದ್ದ ಖಾಸಗಿ ಪಿರ್ಯಾದನ್ನು ದಾಖಲು ಮಾಡಿರುತ್ತೇನೆ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

sd/-

ಸಿ.ಜೆ. ಮತ್ತು ಹೆ. ಜೆ.ಎಮ್.ಎಫ್.ಸಿ.,

ತರೀಕೆರೆ

ಸಾಕ್ಷಿಯ ಸಹಿ::